ಸಂ:ಡಿ–1/ಬಿಯುಡಿ/ಸಿಆರ್–2/2010–2011

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯಪಡೆ ಮುಖ್ಯಸ್ಥರು)ಇವರ ಕಛೇರಿ
ಅರಣ್ಯ ಭವನ ಬೆಂಗಳೂರು ದಿ:08/07/2010

## ಅಧಿಕೃತ ಜ್ಞಾಪನಾ ಪತ್ರ.

**ವಿಷಯ:** 2010–11ನೇ ಸಾಲಿಗೆ ಇಲಾಖಾ ಅನುಸೂಚಿತ ದರಪಟ್ಟಿಯಲ್ಲಿನ ದರಗಳನ್ನು (ಎಸ್.ಎಸ್.ಆರ್) ಪರಿಷ್ಕರಿಸುವ ಬಗ್ಗೆ.

**ಉಲ್ಲೇಖ:**
**1.** ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಡಿ–1/ಬಿಯುಡಿ/ಸಿಆರ್–2/2010–11 ದಿ:10–05–2010
**2.** ಕಾರ್ಮಿಕ ಇಲಾಖೆಯ ಸೇರ್ಪಡೆ ಪತ್ರ ಸಂಖ್ಯೆ:ಕಾಇ–108/ಎಲ್ಎಂಡಬ್ಲ್ಯೂ–2009 ದಿ:25–05–2010
**3.** ದಿ:02–06–2010ರ ಸಾಮಾನ್ಯ ಅನುಸೂಚಿತ ದರ ಪರಿಷ್ಕರಣೆ ಸಮಿತಿ ಸಭೆಯ ನಡವಳಿಗಳು

* * *

**ಪ್ರಸ್ತಾವನೆ:–**

ಉಲ್ಲೇಖ–1ರ ಆದೇಶದಲ್ಲಿ 2010–11ನೇ ಸಾಲಿಗೆ ಅರಣ್ಯ ಇಲಾಖೆಯ ಅನುಸೂಚಿತ ದರಪಟ್ಟಿಯಲ್ಲಿನ ದರಗಳನ್ನು ಪರಿಷ್ಕರಿಸಿ ಮಂಜೂರು ಮಾಡಲಾಗಿತ್ತು. ನಂತರ ಕಾರ್ಮಿಕ ಇಲಾಖೆಯು ಈ ಹಿಂದಿನ ವರ್ಷದಲ್ಲಿ ಅಕುಶಲ ವರ್ಗದಡಿ ವರ್ಗೀಕರಿಸಿದ್ದ ಅರಣ್ಯ ಇಲಾಖೆಯ ನೆಡುತೋಪುಗಳಲ್ಲಿ ಸಸಿ ನೆಡುವವರು, ನೆಡುತೋಪುಗಳಲ್ಲಿ ಬೀಜ ಬಿತ್ತುವುದು / ನೆಡುವುದು, ನರ್ಸರಿ ಕೆಲಸಗಳಲ್ಲಿ ವಾಟರಿಂಗ್ ಹೊರತುಪಡಿಸಿ ಗ್ರೇಡಿಂಗ್ ಮಾಡುವವರು / ಶಿಪ್ಪಿಂಗ್ಮಾಡುವವರು / ಸೋಯಿಂಗ್ ಮಾಡುವವರು / ಟ್ರಾನ್ಸ್‌ಪ್ಲಾಂಟಿಂಗ್ ಮಾಡುವ ಕೆಲಸಗಾರರನ್ನು ಅರೆ ಕುಶಲ ವರ್ಗದ ಕೆಲಸಗಾರರೆಂದು ವರ್ಗೀಕರಿಸಿದೆ. ಈ ಹಿನ್ನಲೆಯಲ್ಲಿ ದಿನಾಂಕ:02–06–2010ರಂದು ನಡೆದ ಸಾಮಾನ್ಯ ಅನುಸೂಚಿತ ದರ ಪರಿಷ್ಕರಣೆ ಸಮಿತಿಯ ಸಭೆಯಲ್ಲಿ ಈ ವಿಚಾರದ ಬಗ್ಗೆ ಪರಿಶೀಲಿಸಿ, ಕಾರ್ಮಿಕ ಇಲಾಖೆಯು ಮೇಲೆ ತಿಳಿಸಿರುವ ಕೆಲಸಗಾರರನ್ನು 2010–11ನೇ ಸಾಲಿನಿಂದ ಅರೆ ಕುಶಲ ನೌಕರರೆಂದು ಪರಿವರ್ತಿಸಿರುವುದನ್ನು ಗಣನೆಗೆ ತೆಗೆದುಕೊಂಡು, ಈ ಕೆಲಸಗಾರರಿಗೆ 2009–10ನೇ ಸಾಲಿಗೆ ಅಕುಶಲ ವರ್ಗದಡಿ ಮಂಜೂರು ಮಾಡಿದ್ದ ಮಜೂರಿ ಹಣ ಹಾಗು ಈ ಕೆಲಸಗಾರರು ಈಗ ಅರೆ ಕುಶಲ ವರ್ಗಕ್ಕೆ ಬದಲಾವಣೆಯಾದ ಕಾರಣ 2010–11ನೇ ಸಾಲಿಗೆ ಅರೆ ಕುಶಲ ನೌಕರರಿಗೆ ಮಂಜೂರಾದ ಹಣದ ನಡುವಿನ ವ್ಯತ್ಯಾಸದ ಲೆಕ್ಕದ ಆಧಾರದ ಮೇಲೆ ಶೇಕಡಾ 19.08ರಷ್ಟು ಹೆಚ್ಚಳಕ್ಕೆ ಶಿಫಾರಸ್ಸು ಮಾಡಿತ್ತು. ಸಮಿತಿಯ ಶಿಫಾರಸ್ಸುಗಳನ್ನು ಪರಿಶೀಲಿಸಿ, ಉಲ್ಲೇಖ–1 ರಲ್ಲಿ ನಮೂದಿಸಿರುವ ದಿನಾಂಕ:10–05–2010ರ ಆದೇಶದಲ್ಲಿ 2010–11ನೇ ಸಾಲಿಗೆ ಅರಣ್ಯ ಇಲಾಖೆಯ ಅನುಸೂಚಿತ ದರಪಟ್ಟಿಯಲ್ಲಿನ ದರಗಳನ್ನು ಪರಿಷ್ಕರಿಸಿ ಮಂಜೂರು ಮಾಡಿದ್ದ ಸಂದರ್ಭದಲ್ಲಿ ಈ ವರ್ಗದ ಕೆಲಸಗಾರರಿಗೆ ಅಕುಶಲ ನೌಕರರ ದರಗಳನುಸಾರ ರೂ.131.79ರಂತೆ ಈಗಾಗಲೆ ದರ ಮಂಜೂರು ಮಾಡಲಾಗಿದ್ದು, ಈಗ ಈ ವರ್ಗದ ಕೆಲಸಗಾರರಿಗೆ ರೂ.139.79ರಂತೆ ದರ ಮಂಜೂರು ಮಾಡಬೇಕಿರುವ ಕಾರಣ ಇವರೆಡರ ನಡುವಿನ ವ್ಯತ್ಯಾಸ ಅಂದರೆ ಶೇಕಡಾ 6.07ರಷ್ಟು ಮಾತ್ರ ಹೆಚ್ಚಳ ನೀಡಬೇಕಿರುವುದನ್ನು ಗಣನೆಗೆ ತೆಗೆದುಕೊಂಡು ಅರಣ್ಯ ಇಲಾಖೆಯ ಮಂಜೂರಾದ ಅನುಸೂಚಿತ ದರ ದರಪಟ್ಟಿಯಲ್ಲಿ ಮೇಲೆ ನಮೂದಿಸಿರುವ ವರ್ಗದ ಕೆಲಸಗಾರರನ್ನು ಒಳಗೊಂಡ ಇಲಾಖೆಯ ಕಾಮಗಾರಿಗಳ ದರಗಳನ್ನು ಪರಿಷ್ಕರಿಸಿ ಮುಂದಿನಂತೆ ಆದೇಶಿಸಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಗಾಗಿ, ಹಾಗು ಸರ್ಕಾರದ ಆದೇಶ ಸಂಖ್ಯೆ:ಅಪಜೀ102/ಅಪಸೇ–1999 ದಿ:4/9/2003ರಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಿರುವ ಪರಿಷ್ಕೃತ ವಿತ್ತಾಧಿಕಾರ ಸಂಖ್ಯೆ: **6 ( c )** ರನ್ವಯ ಕಾರ್ಮಿಕ ಇಲಾಖೆಯು ಅರಣ್ಯ ಇಲಾಖೆಯ ನೆಡುತೋಪುಗಳಲ್ಲಿ ಸಸಿ ನೆಡುವವರು, ನೆಡುತೋಪುಗಳಲ್ಲಿ ಬೀಜ ಬಿತ್ತುವುದು /ನೆಡುವುದು, ನರ್ಸರಿ ಕೆಲಸಗಳಲ್ಲಿ ವಾಟರಿಂಗ್ ಹೊರತುಪಡಿಸಿ ಗ್ರೇಡಿಂಗ್ ಮಾಡುವವರು / ಶಿಪ್ಪಿಂಗ್ಮಾಡುವವರು / ಸೋಯಿಂಗ್ ಮಾಡುವವರು / ಟ್ರಾನ್ಸ್‌ಪ್ಲಾಂಟಿಂಗ್ ಮಾಡುವ ಕೆಲಸಗಾರರನ್ನು 2010–11ನೇ ಸಾಲಿನಿಂದ ಅರೆ ಕುಶಲ ವರ್ಗದ ಕೆಲಸಗಾರರೆಂದು ವರ್ಗೀಕರಿಸಿರುವುದರ ಹಿನ್ನಲೆಯಲ್ಲಿ ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಡಿ–1/ಬಿಯುಡಿ/ಸಿಆರ್–2/2010–11 ದಿ:10–05–2010ರನುಸಾರ 2010–11ನೇ ಸಾಲಿಗೆ ಮಂಜೂರು ಮಾಡಿದ್ದ ಅರಣ್ಯ ಇಲಾಖೆಯ ಅನುಸೂಚಿತ ದರಪಟ್ಟಿಯಲ್ಲಿ ಮೇಲ್ಕಂಡ ವರ್ಗದ ಕೆಲಸಗಾರರನ್ನು ಒಳಗೊಂಡಿರುವ ಇಲಾಖೆಯ ಕಾಮಗಾರಿಗಳಿಗೆ ಮಾತ್ರ **ಶೇಕಡಾ 6.07ರಷ್ಟು** ಹೆಚ್ಚಳವನ್ನು ನೀಡಿ ಮಂಜೂರು ಮಾಡಿದೆ.

**ಪುಟ–2ರಲ್ಲಿ ಮುಂದುವರಿದಿದೆ/–**

2. ಈ ಹೆಚ್ಚಳವನ್ನು ಅರಣ್ಯ ಇಲಾಖೆಯ ಅನುಸೂಚಿತ ದರಪಟ್ಟಿಯಲ್ಲಿನ ಈ ಮುಂದಿನ ಐಟಂಗಳಿಗೆ ಮಾತ್ರ ಅನ್ವಯಿಸಿಕೊಳ್ಳುವುದು.

**Item Numbers: 4 (d), 4(f), 5(e), 7(d), 8(e), 9(e), 10(e), 11(c), 11(d), 11(g), 12(c), 12(d), 12(e), 12(h), 13(c), 13(d), 13(e), 13(h), 14(c), 14(d), 14(e), 14(h), 15(c), 15(d), 15(e), 15(h), 16(c), 16(d), 16(e), 16(h), 17(f), 18(c), 18(f), 19(c), 19(f), 27(a), 27(b), 27(c), 27(d), 27(e), 27(f), 27(g), 28(d), 30(d), 37(c), 37(d), ~~38(e)~~, 38(f), 94(b), 104, 106(f), 106 (j), 106(m), 106(o), —— 109(h), 113(d).**

3. ಈಗ ಮಂಜೂರು ಮಾಡಿರುವಂತೆ ಹೆಚ್ಚಳವನ್ನು ದಿನಾಂಕ:**01-04-2010**ರಿಂದ ನಿರ್ವಹಿಸಿರುವ ಕಾಮಗಾರಿಗಳಿಗೆ ಮಾತ್ರ ಅನ್ವಯಿಸಿಕೊಳ್ಳತಕ್ಕದ್ದು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

ಇವರಿಗೆ:

1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಬೆಂಗಳೂರು.
2. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, E.W.P.R.T. ಅರಣ್ಯ ಸಂಪನ್ಮೂಲ ನಿರ್ವಹಣೆ / ಅಭಿವೃದ್ಧಿ / ಜಾಗೃತ / ಸಂಶೋಧನೆ ಮತ್ತು ಬಳಕೆ / ಕೇಂದ್ರ ಸ್ಥಾನ / ಪ್ರಾಜೆಕ್ಟ್ / ಕೇಂದ್ರ ಸ್ಥಾನ ಮತ್ತು ಸಮನ್ವಯ ಬೆಂಗಳೂರು.
3. ಪ್ರತಿಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕಾರ್ಯಯೋಜನೆ / ಮೌಲ್ಯಮಾಪನ / ವನ್ಯಜೀವಿ / ಅರಣ್ಯ ಸಂರಕ್ಷಣೆ / ಭೂದಾಖಲೆ / ಸಿಬ್ಬಂದಿ / ಪರಿಹಾರಾತ್ಮಕ ಅರಣ್ಯೀಕರಣ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರ ನಿಧಿ / ಎನ್.ಆರ್.ಇ.ಜಿ.ಎಸ್ / ಎನ್.ಎಂ.ಬಿ–ಎನ್.ಎ.ಪಿ ಬೆಂಗಳೂರು / ತರಬೇತಿ–ಧಾರವಾಡ / ಹುಲಿಯೋಜನೆ ಮೈಸೂರು ಹಾಗು ಶಿವಮೊಗ್ಗ / ಆನೆ ಯೋಜನೆ ಮೈಸೂರು.
4. ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ವೃತ್ತ /ಸಂಶೋಧನೆ ವೃತ್ತ / ಕಾರ್ಯಯೋಜನೆ ವೃತ್ತಗಳು.
5. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ವಿಭಾಗ / ವನ್ಯಜೀವಿ ವಿಭಾಗ / ಅರಣ್ಯ ಸಂಚಾರಿ ದಳ / ತರಬೇತಿ ಘಟಕ / ಸಾಮಾಜಿಕ ಅರಣ್ಯ ವಿಭಾಗಗಳು.
6. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ತರಬೇತಿ ಸಂಸ್ಥೆ, ಕುಶಾಲನಗರ / ಇಲವಾಲ ಮೈಸೂರು /ಬೀದರ್ / ತಟ್ಟಿಹಳ್ಳ ಹಾಗು ವನ್ಯಜೀವಿ ಉಪ ವಿಭಾಗ ರಾಣೇಬೆನ್ನೂರು.